# Bengaluru boy gets 4th in NEET

## Another B'luru girl secures 41st rank

**BENGALURU, DHNS: The long wait for the results of the National Eligibility cum Entrance Test (NEET) ended on a happy note for Karnataka, with a student from Bengaluru securing the fourth rank.**

The test, conducted by the Central Board for Secondary Education, determines admissions to medical and dental colleges across India. Results were declared on Friday.

Sankeerth Sadananda, a student of Delhi Public School (South), had initially set his target on a rank good enough for a seat in Kasturba Medical College, Manipal, or Bangalore Medical College and Research Institute, Bengaluru. He surpassed his own expectations and secured the fourth rank in NEET and the 27th rank in the All India Institute of Medical Sciences entrance test by scoring 692 out of 700.

Though KMC and BMC are well within his reach, Sadananda is keen on AIIMS, New Delhi.

"I don't think there is any place better. Everyone dreams of studying at the premier institution and I wouldn't let this opportunity pass," he said.

### Punjab student is all-India topper



Navdeep

Punjab's Navdeep Singh, the country topper, scored 697 out of 720.

Madhya Pradesh's Archit Gupta, who secured 695, came second. He had recently bagged the second position in the All India Institute of Medical Sciences (AIIMS) admission test.



Archit

**STATE TOPPERS**



**FROM LEFT:** Sankeerth (rank 4), Rakshita (rank 41) and Preethi K (rank 2 in ST category)

### Another good scorer

Another Bengaluru student, Rakshita Ramesh, has secured the 41st rank in NEET and hopes to get study at Bangalore Medical College.

Though she could try for medical colleges in other states, she wants to be close to home.

Rakshita had secured the first rank in the admission test for Indian Systems of Medicine and Homoeopathy and BSc (Agriculture), but had been waiting for NEET results as she is keen on MBBS.

"I want to become a neurologist as I am interested in the human brain and its functioning," she said.

» NEET, Page 8

DECCAN HERALD



# NEET results out...

NEET, from Page 1

She said questions at the entrance test must not be confusing. "I challenged the answers to five questions when the answer key was released. I think we got grace marks for two of them. Such confusing questions lead to stress while writing the test and we also lose time," she said.

2nd in ST category

Preethi K from Ballari secured the all-India second rank in the Scheduled Tribes category.

"It has been my childhood dream to become a doctor because I am fascinated by the human body," Preethi said.

She grew up in Ballari and studied there till Class X before moving to Bengaluru to join Sri Chaitanya Techno School in Electronics City.

"I used to stay at the hostel and it wasn't bad even though I was away from family. We used to have regular tests, which were useful," Preethi said. Her father is a mechanical engineer and mother a homemaker.

The third rank in the ST category was secured by Ambika, a student of the Kannada-medium Gnyana Sudha Vidalaya in Bidar.

P Y Ganesh, a student of Vaishnavi Chethana PU college, Davangere, secured the all-India sixth rank in the OBC category.

ವಿಜಯವಾಣಿ

# ಯೋಗಾಭ್ಯಾಸ ನಿತ್ಯ ಜೀವನದ ಭಾಗವಾಗಲಿ

## ದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯದ ಆಯುಷ್ ವಿಭಾಗ ವೈದ್ಯಾಧಿಕಾರಿ ಡಾ.ನಿತಿನ್ ಅಭಿಮತ

■ ವಿಜಯವಾಣಿ ಸುದ್ದಿಜಾಲ ಮುಳಬಾಗಿಲು

ಮುಂದುವರಿದ ರಾಷ್ಟ್ರಗಳು ಭಾರತೀಯ ಯೋಗ, ಆಯುರ್ವೇದವನ್ನು ಬೇರೆ ಬೇರೆ ಹೆಸರಿನಲ್ಲಿ ಅನುಷ್ಠಾನ ಮಾಡಿ ಆರೋಗ್ಯ ಕಾಪಾಡಿಕೊಳ್ಳುವ ಕಡೆ ಗಮನ ಹರಿಸಿದೆ. ಆದರೆ, ಭಾರತೀಯರಾದ ನಾವು ಇನ್ನೂ ಮೀನಮೇಷ ಎಣಿಸುತ್ತಿರುವುದು ಸಮಂಜಸವಲ್ಲ ಎಂದು ದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯದ ಆಯುಷ್ ವಿಭಾಗ ವೈದ್ಯಾಧಿಕಾರಿ ಡಾ. ನಿತಿನ್ ಜಿ.ಪಾಟೀಲ್ ಅಭಿಪ್ರಾಯಪಟ್ಟರು.

» ಪ್ರತಿದಿನ ಯೋಗ ಮಾಡಿದರೆ ಉತ್ತಮ ಆರೋಗ್ಯ ಪಡೆಯಲು ಸಾಧ್ಯ

ಹರಿದಾಸ ಪೀಠದಲ್ಲಿ ಪತಂಜಲಿ ಯೋಗ ಶಿಕ್ಷಣ ಸಮಿತಿ, ಡಾ.ಮನೋಹರ ನಾಯಿಗೌಡ ಮೆಮೋರಿಯಲ್ ಆಸ್ಪತ್ರೆ, ರಾಷ್ಟ್ರೀಯ ಸ್ವಯಂ ಸೇವಕರ ಸಂಘ ಹಾಗೂ ದಿಗ್ವಿಜಯ, ವಿಜಯವಾಣಿ ಮಾಧ್ಯಮ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಯೋಗ ದಿನಾಚರಣೆಯಲ್ಲಿ ಮಾತನಾಡಿದರು.

ಯೋಗವೇ ಜೀವನದ ಶೈಲಿಯಾಗಬೇಕು. ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ಅರ್ಧಗಂಟೆ ಯೋಗ ಮಾಡಿದರೆ ಸಾಲದು. ಪ್ರತಿ ಕ್ಷಣವೂ ಯೋಗದ ಅನುಭವ ಪಡೆದರೆ ಉತ್ತಮ ಆರೋಗ್ಯ ಪಡೆಯಲು ಸಾಧ್ಯವಾಗುತ್ತದೆ ಎಂದರು.

ಅನಿವಾಸಿ ಭಾರತೀಯ ಸಿ.ಕೆ.ಹಿರಣ್ಯಗೌಡ, ತಹಸೀಲ್ದಾರ್ ಬಿ.ಎನ್.ಪ್ರವೀಣ್, ಸರಸ್ವತಿ ಹಿರಣ್ಯಗೌಡ, ಡಾ.ಡಿ.ಎಂ.ದೊಡ್ಡಭದ್ರೇಗೌಡ, ಪತಂಜಲಿ ಯೋಗ ಶಿಕ್ಷಣ ಸಮಿತಿ ಅಧ್ಯಕ್ಷ ಎನ್. ವೆಂಕಟೇಶ್, ಆರ್‌ಎಸ್‌ಎಸ್ ನಾರಾಯಣಪ್ಪ, ಯಾನಂದಹಳ್ಳಿ ನಾರಾಯಣಸ್ವಾಮಿ, ಸಿ.ಕೆ. ರಾಧವಲ್ಲಭ, ಶ್ಯಾಮಲಮ್ಮ, ಜಿ.ನಾರಾಯಣಪ್ಪ, ಮತ್ತಿತರರಿದ್ದರು.



ಮುಳಬಾಗಿಲಿನ ಹರಿದಾಸಪೀಠದಲ್ಲಿ ಆಯೋಜಿಸಿದ್ದ 3ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಭಾಗವಹಿಸಿರುವ ಯೋಗಪಟುಗಳು.

### ಗಣ್ಯರಿಗೆ ಸನ್ಮಾನ

ಡಿವೈಎಸ್ಪಿ ಬಿ.ಕೆ.ಉಮೇಶ್ ಡಾ.ಸಿ.ಕೆ.ಹಿರಣ್ಯಗೌಡ ಬರೆದಿರುವ ಜಿಮ್-3ರ 4ನೇ ಆವೃತ್ತಿಯ ಆಯುಷ್ ಹಾಗೂ ಡಾ.ಕರಣ್ ಸಿಂಗ್‌ರವರು ಸ್ವಾಮಿ ವಿವೇಕಾನಂದರ ಬಗ್ಗೆ ಬರೆದಿರುವ ಇಂಗ್ಲಿಷ್ ಕೃತಿಯನ್ನು ಭಾಷಾಂತರಿಸಿ ಹೊರತಂದಿರುವ ಸಿಡಿಯನ್ನು ಲೋಕಾರ್ಪಣೆ ಮಾಡಿದರು. ಪುರಂದರ ಸೇವಾ ಟ್ರಸ್ಟ್ ಅಧ್ಯಕ್ಷ ನ.ರಾಜಾರಾವ್, ಪತಂಜಲಿ ಯೋಗ ಸಹ ಶಿಕ್ಷಕರಾದ ಮಂಜುನಾಥ್, ಕವಿತ ಬ್ರಹ್ಮಯ್ಯ ಅವರನ್ನು ಸನ್ಮಾನಿಸಲಾಯಿತು.

ಉದಯವಾಣಿ



# ನೀಟ್‌ನಲ್ಲಿ ಉಡುಪಿಯ ಸಂಕೀರ್ತ್ 4ನೇ ರ‍್ಯಾಂಕ್



ಸಂಕೀರ್ತ್ ಸದಾನಂದ

ಬೆಂಗಳೂರು: ಕೇಂದ್ರ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ (ಸಿಬಿಎಸ್ಇ) ಶುಕ್ರವಾರ ಪ್ರಕಟಿಸಿದ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್) ಫ‌ಲಿತಾಂಶದಲ್ಲಿ ಕರ್ನಾಟಕದ ಸಂಕೀರ್ತ್ ಸದಾನಂದ 4ನೇ ರ‍್ಯಾಂಕ್ ಪಡೆದು ವಿಶೇಷ ಸಾಧನೆ ಮಾಡಿದ್ದಾರೆ.

ದೇಶದ ವಿವಿಧೆಡೆ ವೈದ್ಯಕೀಯ ಕಾಲೇಜುಗಳ ಎಂಬಿಬಿಎಸ್ ಹಾಗೂ ಬಿಡಿಎಸ್ ಕೋರ್ಸ್‌ಗೆ ಪ್ರವೇಶ ಪಡೆಯಲು ನೀಟ್ ರ‍್ಯಾಂಕ್ ಸಹಕಾರಿಯಾಗಲಿದೆ. ಪಂಜಾಬ್‌ನ ನವ್‌ದೀಪ್‌ಸಿಂಗ್ 700ಕ್ಕೆ 697 ಅಂಕ ಪಡೆದು ಪ್ರಥಮ ರ‍್ಯಾಂಕ್ ಗಳಿಸಿದ್ದಾರೆ. ಮಧ್ಯಪ್ರದೇಶದ ಅರ್ಚಿತ್ ಗುಪ್ತ (695) ಹಾಗೂ ಮನೀಶ್ ಮುಲ್ಚಂದಾನಿ(695) ಕ್ರಮವಾಗಿ 2 ಮತ್ತು 3ನೇ ಸ್ಥಾನ ಪಡೆದುಕೊಂಡಿದ್ದಾರೆ. ಉಡುಪಿ ಜಿಲ್ಲೆಯ ಹಿರಿಯಡ್ಕ ಮೂಲದ ಬೆಂಗಳೂರಿನ ಡೆಲ್ಲಿ ಪಬ್ಲಿಕ್ ಸ್ಕೂಲ್‌ನ ವಿದ್ಯಾರ್ಥಿ ಹಾಗೂ ಬೇಸ್ ಸಂಸ್ಥೆಯಲ್ಲಿ ತರಬೇತಿ ಪಡೆದಿರುವ ಸಂಕೀರ್ತ್ ಸದಾನಂದ (692ಅಂಕ) 4ನೇ ಸ್ಥಾನ ಪಡೆದುಕೊಂಡಿದ್ದಾರೆ. ಮಹಾರಾಷ್ಟ್ರದ ದೊಗ್ರ ಅಭಿಷೇಕ್ ವೀರೇಂದ್ರ (691) 5ನೇ ರ‍್ಯಾಂಕ್ ಪಡೆದಿದ್ದಾರೆ.

▶ 6ನೇ ಪುಟಕ್ಕೆ

ಉದಯವಾಣಿ



# 'ನೀಟ್'ನಲ್ಲಿ ರಾಜ್ಯದ ಸಂಕೇತ್‌ಗೆ 4ನೇ ರ್‍ಯಾಂಕ್

1ನೇ ಪುಟದಿಂದ ▸ ಮೇ 7ರಂದು ನಡೆದಿರುವ ನೀಟ್ ಪರೀಕ್ಷೆಯಲ್ಲಿ 11,38,890 ವಿದ್ಯಾರ್ಥಿಗಳು ಹಾಜರಾಗಿದ್ದರು. ಅದರಲ್ಲಿ 2,66,221 ಹುಡುಗರು, 3,45,313 ಹುಡುಗಿಯರು ಸೇರಿ 6,11,539 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಪರೀಕ್ಷೆ ಬರೆದಿದ್ದ 8 ತೃತೀಯಲಿಂಗಿ ವಿದ್ಯಾರ್ಥಿಗಳ ಪೈಕಿ ಐವರು ಉತ್ತೀರ್ಣರಾಗಿದ್ದಾರೆ. 9,13,033 ವಿದ್ಯಾರ್ಥಿಗಳು ಇಂಗ್ಲಿಷ್, 1,20,663 ವಿದ್ಯಾರ್ಥಿಗಳು ಹಿಂದಿಯಲ್ಲಿ ಹಾಗೂ 712 ವಿದ್ಯಾರ್ಥಿಗಳು ಕನ್ನಡದಲ್ಲಿ ಪರೀಕ್ಷೆ ಬರೆದಿದ್ದರು. ಮೊದಲ 25 ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಲ್ಲಿ 9 ಹುಡುಗಿಯರು ಹಾಗೂ 16 ಹುಡುಗರು ಸೇರಿದ್ದಾರೆ. ಮೊದಲ ಹತ್ತು ರ್‍ಯಾಂಕ್‌ನಲ್ಲಿ 9 ಹುಡುಗರಿದ್ದಾರೆ.

ಪ್ರಶ್ನೆ ಪತ್ರಿಕೆ ಗೊಂದಲಕ್ಕೆ ಸಂಬಂಧಿಸಿದಂತೆ ಮದ್ರಾಸ್ ಹೈಕೋರ್ಟ್ ನೀಟ್ ಫ‌ಲಿತಾಂಶಕ್ಕೆ ತಡೆ ನೀಡಿತ್ತು. ಸಿಬಿಎಸ್‌ಇ ಬೋರ್ಡ್ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದು, ಫ‌ಲಿತಾಂಶ ನೀಡುವಂತೆ ಜೂ.12ರಂದೇ ಸುಪ್ರೀಂ ಕೋರ್ಟ್ ಆದೇಶ ನೀಡಿತ್ತು. ಅದರಂತೆ ಶುಕ್ರವಾರ ಫ‌ಲಿತಾಂಶ ಪ್ರಕಟಿಸಿದೆ.

> ಮೊದಲ 200 ರ್‍ಯಾಂಕ್‌ನಲ್ಲಿ ನನ್ನ ಹೆಸರನ್ನು ನಿರೀಕ್ಷಿಸಿದ್ದೆ. ಫ‌ಲಿತಾಂಶ ನೋಡಿದಾಗ 4ನೇ ರ್‍ಯಾಂಕ್ ಬಂದಿರುವುದು ತಿಳಿದು ತುಂಬಾ ಖುಷಿಯಾಗಿತ್ತು. ಸಿಇಟಿ ಬರೆದಿದ್ದೆ, ಆದರೆ ಹೆಚ್ಚಿನ ಗಮನವನ್ನು ನೀಟ್ ಮೇಲೆ ಇಟ್ಟಿದ್ದೆ. ಯಾವುದೇ ರೀತಿಯಲ್ಲೂ ವೇಳಾಪಟ್ಟಿ ಸಿದ್ಧಪಡಿಸಿಕೊಂಡು ಓದಿಲ್ಲ. ಸಮಯ ಸಿಕ್ಕಾಗಲೆಲ್ಲ. ಓದುತ್ತಿದ್ದೆ. ಓದಿನ ಜತೆಗೆ ಜಾಗಿಂಗ್, ಡ್ರಾಯಿಂಗ್, ಸ್ವಿಮ್ಮಿಂಗ್ ಕೂಡ ಮಾಡುತ್ತಿದ್ದೆ. ದೆಹಲಿಯ ಏಮ್ಸ್‌ನಲ್ಲಿ ಎಂಬಿಬಿಎಸ್ ಪದವಿ ಪಡೆಯಲಿದ್ದೇನೆ. ನೀಟ್ ಪ್ರಶ್ನೆ ಪತ್ರಿಕೆ ತುಂಬಾ ಸುಲಭ ಇತ್ತು. ಪಾಲಕರ, ಶಿಕ್ಷಕರ ಹಾಗೂ ಕೋಚಿಂಗ್ ಪಡೆದ ಬೇಸ್ ಸಂಸ್ಥೆಯ ತರಬೇತುದಾರರು ತುಂಬಾ ಸಲಹೆ ಸೂಚನೆ, ಪ್ರೋತ್ಸಾಹ ನೀಡಿದ್ದರು. ತಂದೆ ಖಾಸಗಿ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ತಾಯಿ ಗೃಹಿಣಿ. ಉಡುಪಿ ಜಿಲ್ಲೆಯ ಹಿರಿಯಡ್ಕ ನಮ್ಮ ಮೂಲ ಊರು.
>
> ● **ಸಂಕೇತ್ ಸದಾನಂದ**, ನೀಟ್ 4ನೇ ರ್‍ಯಾಂಕ್

## ಅಂಬಿಕಾ ಅಮೋಘ ಸಾಧನೆ

ಬೀದರ: ವೈದ್ಯಕೀಯ ಕೋರ್ಸ್ ಪ್ರವೇಶಕ್ಕಾಗಿ ಕೇಂದ್ರ ಪ್ರೌಢಶಿಕ್ಷಣ ಮಂಡಳಿ ನಡೆಸಿದ ಪ್ರಸಕ್ತ ಸಾಲಿನ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ ಯಲ್ಲಿ (ಪರಿಶಿಷ್ಟ ಪಂಗಡ ಮತ್ತು ಅಂಗವಿಕಲರ ಪ್ರವರ್ಗದಲ್ಲಿ) ಔರಾದ್‌ನ ಡೋಣಗಾಂವ್ ಗ್ರಾಮದ ಅಂಬಿಕಾ



ಮೇತ್ರೆ, ರಾಷ್ಟ್ರಮಟ್ಟದಲ್ಲಿ 3ನೇ ರ್‍ಯಾಂಕ್ ಗಳಿಸಿದ್ದಾಳೆ. ಈ ಪ್ರವರ್ಗದಲ್ಲಿ ಸಾಧನೆ ಮಾಡಿದ ಮೊದಲ ಕನ್ನಡತಿ ಎನಿಸಿಕೊಂಡಿದ್ದಾಳೆ. ಈಕೆ ನಗರದ ಜ್ಞಾನ ಸುಧಾ ಕಾಲೇಜಿನ ವಿದ್ಯಾರ್ಥಿನಿ.

ಅಂಬಿಕಾ ಮೇತ್ರೆಯದ್ದು ಕೃಷಿ ಕುಟುಂಬ. ಔರಾದ ದನ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ಪ್ರೌಢ ಶಿಕ್ಷಣ ಮುಗಿಸಿದ್ದು, ಕಾಲೇಜು ಶಿಕ್ಷಣ ಪಡೆದ ಕುಟುಂಬದ ಮೊದಲ ಸದಸ್ಯೆ. ಒಬ್ಬ ತಮ್ಮ ಮತ್ತು ಇಬ್ಬರು ತಂಗಿಯಂದಿರು ಪ್ರೌಢಶಿಕ್ಷಣ ಪಡೆಯುತ್ತಿದ್ದಾರೆ. ಪಿಯುಸಿಯಲ್ಲಿ ಪಿಸಿಎಂಬಿ ವಿಭಾಗದಲ್ಲಿ ಶೇ.72 (ಒಟ್ಟಾರೆ ಶೇ.60) ಅಂಕ ಗಳಿಸಿರುವ ಈಕೆ, ನೀಟ್ ಪರೀಕ್ಷೆಯಲ್ಲಿ 720 ಅಂಕಗಳ ಪೈಕಿ 287 ಅಂಕ ಪಡೆದಿದ್ದಾಳೆ. ಭೌತಶಾಸ್ತ್ರ 66, ರಸಾಯನಶಾಸ್ತ್ರ 90 ಮತ್ತು ಜೀವಶಾಸ್ತ್ರದಲ್ಲಿ 131 ಅಂಕ ಗಳಿಸಿದ್ದಾಳೆ.